
## ಹುಡುಕಾಟದ ಹೃದಯ



ಜಾರ್ಜ್ ಒವ್ಯಾಷ್‌ವಿಲಿ ಜಾರ್ಜಿಯಾದ ಮಟ್ಸ್‌ಖೆಟ ಎಂಬಲ್ಲಿ ಹುಟ್ಟಿದವರು. ಅವರಿಗೀಗ 53 ವರ್ಷ ವಯಸ್ಸು. ಜಾರ್ಜಿಯನ್ ಸ್ಟೇಟ್ ಇನ್‌ಸ್ಟಿಟ್ಯೂಟ್ ಆಫ್ ಸಿನಿಮಾ ಅಂಡ್ ಥಿಯೇಟರ್‌ನಲ್ಲಿ ಪದವಿ ಪಡೆದಾಗ ಅವರಿಗೆ 33 ವರ್ಷ. 2005ರಲ್ಲಿ ಹಾಲಿವುಡ್‌ನ ಯೂನಿವರ್ಸಲ್ ಸ್ಟುಡಿಯೋಸ್‌ನ ನ್ಯೂಯಾರ್ಕ್ ಫಿಲ್ಮ್ ಅಕಾಡೆಮಿಯಲ್ಲಿ ಇನ್ನೊಂದು ಪದವಿ ಪಡೆದರು. 13ನೇ ವಯಸ್ಸಿನಿಂದ ಸಿನಿಮಾ ಮಾಡುವ ಕನಸು ಕಟ್ಟಿಕೊಂಡ ಅವರಿಗೆ ಮೊದಲ ಪೂರ್ಣಪ್ರಮಾಣದ ಚಲನಚಿತ್ರ ಮಾಡಲು ಸಾಧ್ಯವಾದುದು 45ನೇ ವಯಸ್ಸಿನಲ್ಲಿ. 'ದಿ ಅದರ್ ಬ್ಯಾಂಕ್' ಎಂಬುದು ಆ ಸಿನಿಮಾ. ಅದಾದ ಮೇಲೆ 'ಕಾರ್ನ್ ಐಲ್ಯಾಂಡ್' (2014) ತೆರೆಕಾಣಿಸುವಷ್ಟರಲ್ಲಿ ಅವರಿಗೆ 51 ದಾಟಿತ್ತು. ಮಕ್ಕಳ ನಾಟಕಗಳನ್ನು ನಿರ್ದೇಶಿಸಿದ್ದೇ ಅಲ್ಲದೆ ಕಿರುಚಿತ್ರಗಳನ್ನೂ ಮಾಡಿ ಅವರು ಕೈಪಳಗಿಸಿಕೊಂಡಿದ್ದಾರೆ. ನ್ಯೂಯಾರ್ಕ್‌ನಲ್ಲಿ 'ಜಾರ್ಜಿಯನ್ ಬುಲೆಟಿನ್' ಸುದ್ದಿ ಕಾರ್ಯಕ್ರಮವನ್ನು ಟೀವಿ ವಾಹಿನಿಗಾಗಿ ಕಟ್ಟಿಕೊಟ್ಟ ಅವರು 2005ರಲ್ಲಿ ತಯಾರಿಸಿದ 'ಐ ಲೆವೆಲ್' ಕಿರುಚಿತ್ರಕ್ಕೆ ಹಲವು ಪ್ರಶಸ್ತಿಗಳು ಸಂದವು. ನಿಜವಾದ ಅರ್ಥದಲ್ಲಿ ಅವರು ಸಿನಿಮಾ ಕನಸುಗಾರ ಎನ್ನಲು ಇವೆಲ್ಲಾ ಪುರಾವೆಗಳೇ ಹೌದು.

ನೋಡುಗ ಅಯ್ಯೋ ದುರಂತವೇ ಎಂದುಕೊಳ್ಳುವ ಹೊತ್ತಿಗೆ ಇನ್ನೊಬ್ಬ ರೈತ ಅಂಥದ್ದೇ ದ್ವೀಪದ ಮಣ್ಣಿನ ಪರೀಕ್ಷೆ ಮಾಡುವ ಶಾಟ್ ಮೂಡುತ್ತದೆ. ಒವ್ಯಾಷ್‌ವಿಲಿ ಕನಸುಗಾರ ಎನಿಸುವುದೇ ಇಂಥ ಸೂಕ್ಷ್ಮದ ಮೂಲಕ.

ರೈತನ ಪಾತ್ರಧಾರಿ ಯಲಿಯಾಸ್ ಸಲ್ಮಾನ್. ಅವನ ಮೊಮ್ಮಗಳಾಗಿ ನಟಿಸಿರುವ ಮರಿಯಮ್ ಬುಟುರಿಷ್‌ವಿಲಿಗೆ ಇದು ಮೊದಲ ಸಿನಿಮಾ. ಗಾಯಗೊಂಡ ಜಾರ್ಜಿಯನ್ ಯೋಧ ಇರಕ್ಲಿ ಸಮುಷಿಯಾ ಚೆಲುವಾಂತ ಚೆನ್ನಿಗ. ಇವರ್‍ಯಾರೂ ನಟಿಸಿಲ್ಲ; ವರ್ತಿಸಿದ್ದಾರೆ. ಯಲಿಯಾಸ್ ಸಲ್ಮಾನ್ ಅವರ ಮುಖದ ಗೆರೆಗಳು ಕದಲುವುದೇ ಆಗೊಮ್ಮೆ ಈಗೊಮ್ಮೆ. ಆದರೆ, ಆ ಮುಖದಲ್ಲಿ ದಟ್ಟವಾಗಿರುವ ಅವೇ ಗೆರೆಗಳು ಆ ದೇಶದ ಕೃಷಿಕನೊಬ್ಬ ಪ್ರಕೃತಿಗೇ ಸವಾಲು ಹಾಕಿ ಬೆಳೆ ತೆಗೆಯುವ ಧಾರ್ಷ್ಟ್ಯವನ್ನು ಸಮರ್ಥವಾಗಿ ದಾಟಿಸುತ್ತವೆ. ಛಾಯಾಗ್ರಾಹಕ ಎಲಿಮರ್ ರಗಲ್ಯಿ 35 ಎಂಎಂನಲ್ಲಿ ಪಾತ್ರಗಳ ವರ್ತನೆಯನ್ನು ವಿವಿಧ ಕೋನಗಳಲ್ಲಿ ಗ್ರಹಿಸಿಕೊಂಡು, ಚಿತ್ರಕಥಾ ಔಚಿತ್ಯಕ್ಕೆ ತಕ್ಕ ಹದವನ್ನು ತುಳುಕಿಸಿದ್ದಾರೆ.

ಮಾತಿನ ಬಳಕೆಯ ವಿಷಯದ ಪೂರ್ವಗ್ರಹ ಪ್ರಶ್ನಿಸುವಂತಿದ್ದರೂ ನೂರು ನಿಮಿಷಗಳ ಸಿನಿಮಾ ಎದೆಯಲ್ಲೇ ಬೆಳೆ ತೆಗೆದು, ವಿಷಾದದ ಕುಂಭದ್ರೋಣ ಮಳೆಯನ್ನೂ ಸುರಿಸಿ, ಅಲ್ಲಾಡಿಸಿಬಿಡುತ್ತದೆ. ಸಿನಿಮಾ ಕಾಡಬೇಕಾಗಿರುವುದು ಹೀಗೆಯೇ ಅಲ್ಲವೇ?

⌘